## ಸತತ ೪ನೇ ದಿನ ಅಲ್ಪ ಇಳಿಕೆಯಾದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ

ಹಿಂದಿನ ನಾಲ್ಕು ದಿನಗಳಲ್ಲಿ ಅಲ್ಪ ಮಟ್ಟದ ಇಳಿಕೆ ದಾಖಲಿಸಿದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಂದೂ ಬೆಳಗಿನ ಅವಧಿಯಲ್ಲಿ ಸ್ವಲ್ಪ ಮಟ್ಟಿನ ಇಳಿಕೆ ದಾಖಲಿಸಿದೆ. ಇಂಡೋನೇಶಿಯಾದ ಸಿಯೋ ಡೀಸೆಲ್‌ಗೆ ಪಾಮೆಣ್ಣೆ ಬಳಸುವ ಶೇಕಡಾಂಶ ಹೆಚ್ಚಳ, ಪ್ರತಿಕೂಲ ಹವಾಮಾನಗಳಿಂದ ಸದ್ಯ ಉತ್ಪಾದಕ ದೇಶಗಳ ಪಾಮೆಣ್ಣೆ ದಾಸ್ತಾನು ಇಳಿಕೆಯಾಗುವ ಸಾಧ್ಯತೆಗಳಿವೆ. ಇದರಿಂದ ಸದ್ಯ ದರ ಹೆಚ್ಚಳದಲ್ಲಿರುವ ಸಾಧ್ಯತೆಗಳಿವೆ.

## ಏಶ್ಯಾದ ಅಕ್ಕಿ ರಫ್ತು ದರ ಇಳಿಕೆ

ಭಾರತದ ಅಕ್ಕಿ ರಫ್ತು ದರ (ಶೇಕಡಾ ಸಾರಾಬಾಯಿಲ್ಡ್ ಬ್ರೋಕನ್) ಟನ್‌ಗೆ $390–395 ರಿಂದ $385–390ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ವಿಯೆಟ್ನಾಂನಿ 5% ಬ್ರೋಕನ್ ಅಕ್ಕಿ ದರ ಟನ್‌ಗೆ $440–445 ತನಕವಿದೆ. ಬೇಡಿಕೆ ಇಳಿಕೆ ವಿಯೆಟ್ನಾಂನ ಕಟಾವು ಪ್ರಾರಂಭ ಇತ್ಯಾದಿಗಳಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ.

## ಪಾಮೆಣ್ಣೆ ದಾರದ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಈ ವಾರ 2 ಶೇಕಡಾ ಕುಸಿತವಾಗಿದೆಯೆನ್ನಲಾಗಿದೆ. ಉತ್ಪಾದನಾ ಇಳಿಕೆ ಸಾಧ್ಯತೆ, ಅಧಿಕ ರಫ್ತು ಇವುಗಳಿಂದ ಪಾಮೆಣ್ಣೆ ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## ಕೇರಳದ <u>KSCDC</u> ಗೋಡಂಬಿ ಕಾರ್ಖಾನೆಗಳು ಪುನರಾಂಭ

ಕೇರಳದಲ್ಲಿ ಮಾರ್ಚ್ 9ರಿಂದ KSCDC (ಕೇರಳ ರಾಜ್ಯ ಗೋಡಂಬಿ ಅಭಿವೃದ್ಧಿ ಕಾರ್ಪೋರೇಶನ್) ಯ 30 ಗೋಡಂಬಿ ಕಾರ್ಖಾನೆಗಳು 160 ದಿನಗಳ ಕನಿಷ್ಠ ಕಾರ್ಯಾಚರಣೆಯ ನೆಲೆಯಲ್ಲಿ ಪುನರಾರಂಭವಾಗಲಿದೆನ್ನಲಾಗಿದೆ. ಈಗಾಗಲೇ ಮೊಜಾಂಬಿಕ್‌ನಿಂದ 2100 ಟನ್ ಕಚ್ಚಾಗೋಡಂಬಿ ವಿವಿಧ ಕಾರ್ಖಾನೆಗಳಿಗೆ ತಲುಪಿದೆಯೆನ್ನಲಾಗಿದೆ. ಘಾನಾದಿಂದ 3300 ಟನ್, ಐವರಿಕೋಸ್ಟ್‌ನಿಂದ 5000 ಟನ್ ಕಚ್ಚಾ ಗೋಡಂಬಿ ಆಮದಾಗಲಿದೆಯೆನ್ನಲಾಗಿದೆ. ಮಾರ್ಚ್‌ನಲ್ಲಿ 15 ಕೆಲಸದ ದಿನ ಹಾಗೂ ಮುಂದಿನ ಪ್ರತಿ ತಿಂಗಳುಗಳಲ್ಲಿ 20 ದಿನಗಳು ಕೆಲಸ ನಡೆಯುವಂತೆ ಪ್ರಯತ್ನಿಸಲಾಗುವುದೆನ್ನಲಾಗಿದೆ. ಕೋ–ಆಪರೇಟಿವ್ ಸೊಸೈಟಿಗಳ ಮೂಲಕ ದೇಶೀ ಕಚ್ಚಾ ಗೋಡಂಬಿ ಕಿಲೋಗ್ರಾಂಗೆ 114 ರ ದರದಲ್ಲಿ ಖರೀದಿಸಲಾಗುವುದೆನ್ನಲಾಗಿದೆ. ಅಲ್ಲದೆ ರೈತರಿಗೆ ಅಧಿಕ ಇಳುವರಿಯ ಗೋಡಂಬಿ ಗಿಡಗಳನ್ನು ಗಿಡಕ್ಕೆ 60 ರ ನಿರ್ವಹಣಾ ಸಹಾಯಧನದೊಂದಿಗೆ ವಿತರಿಸಲಾಗುವುದೆನ್ನಲಾಗಿದೆ. 3ವರ್ಷ ರೈತರಿಗೆ ನಿರ್ವಹಣಾ ಸಹಾಯಧನ ಲಭಿಸಲಿದೆಯೆನ್ನಲಾಗಿದೆ. KSCDC ಕೋ–ಅಪರೇಟಿವ್ ಸೊಸೈಟಿಗಳ ಮೂಲಕ ಮಾರಾಟ ಜಾಲವನ್ನು ವಿಸ್ತರಿಸುವ ಯೋಜನೆ ಹೊಂದಿದೆಯೆನ್ನಲಾಗಿದೆ. ಮಲಬಾರ್ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗೋಡಂಬಿ ಉತ್ಪಾದನೆಗಳಿಗೆ ಖರೀದಿ ಆದೇಶ ಪಡೆಯಲು ಉದ್ಯೋಗದ ಅವಕಾಶ ನೀಡಿ ಮಾರಾಟದ ಆದೇಶಗಳಿಗೆ ಆಕರ್ಷಕ ಗೌರವಧನ ನೀಡಲಿದೆಯೆನ್ನಲಾಗಿದೆ.